ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1092 ಗ್ರಾಪಂಅ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:23-11-2018.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ಎಲ್ಲಾ ಜಿಲ್ಲಾ ಪಂಚಾಯತ್,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

**ವಿಷಯ:** ಬೆಳೆ ಸಮೀಕ್ಷೆ ಕೈಗೊಳ್ಳುವಾಗ ರೈತರು ಸಹಕರಿಸುವಂತೆ ಕೋರಿ ಗ್ರಾಮ ಪಂಚಾಯತಿಗಳು ಪ್ರಚಾರ ಕೈಗೊಳ್ಳುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಸಿಆಸುಇ (ಇ-ಆ) 267 ಆಮುಕಾ 2018 ದಿನಾಂಕ:03-10-2018.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರವರ ಅರೆ ಸರ್ಕಾರಿ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರದಲ್ಲಿ ಬೆಳೆಗಣತಿ, ಕೃಷಿ ಉತ್ಪಾದನೆ ಮತ್ತು ಪಶು ಸಂಪತ್ತು ಹೆಚ್ಚಳಕ್ಕೆ ಉತ್ತೇಜನ ಗ್ರಾಮ ಪಂಚಾಯತಿಗಳ ಪ್ರಕಾರ್ಯಗಳಲ್ಲಿ ಒಂದಾಗಿರುತ್ತದೆ. ನಿಖರವಾದ ಬೆಳೆಗಳ ವಿಸ್ತೀರ್ಣವನ್ನು ಸರ್ವೆನಂಬರುವಾರು ಪಡೆದು ಕನಿಷ್ಠ ಬೆಂಬಲ ಬೆಲೆ ನಿಗದಿ, ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಸಬ್ಸಿಡಿ ಪಾವತಿ, ಫಲಾನುಭವಿ ಯೋಜನೆಗಳು ಅಲ್ಲದೇ ಇನ್ನಿತರ ಸರ್ಕಾರದ ಯೋಜನೆಗಳಲ್ಲಿ ಅರ್ಹ ರೈತರಿಗೆ ಫಲ ದೊರೆಯುವಂತಾಗಬೇಕೆಂಬುದು ಸರ್ಕಾರದ ಇಚ್ಚೆಯಾಗಿರುತ್ತದೆ. ಆದ್ದರಿಂದ, ಸರ್ಕಾರವು ಆಯವ್ಯಯ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಿದೆ.

"382. 2017-18 ರ ಸಾಲಿನಲ್ಲಿ ನಮ್ಮ ಸರ್ಕಾರವು ಬೆಳೆ ಸಮೀಕ್ಷೆ ಚಟುವಟಿಕೆಯನ್ನು ಕೈಗೆತ್ತಿಕೊಂಡಿದೆ ಮತ್ತು ಸುಮಾರು 1.6 ಕೋಟಿ ರೈತರ ಜಮೀನುಗಳ ಬೆಳೆ ಮಾಹಿತಿಯನ್ನು ಪಡೆದುಕೊಂಡಿದೆ. ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಿರುವ ಈ ಚಟುವಟಿಕೆಯನ್ನು 2018-19 ರ ಸಾಲಿನಲ್ಲಿಯೂ ಮುಂದುವರೆಸಲು ಮತ್ತು ಎಲ್ಲಾ ರೈತರ ಜಮೀನುಗಳನ್ನು ಒಳಪಡಿಸುವ ಉದ್ದೇಶ ಇದೆ. ಈ ಚಟುವಟಿಕೆಯ ಮೂಲಕ ಸೆರೆ ಹಿಡಿಯಲಾದ ಬೆಳೆ ದತ್ತಾಂಶವನ್ನು ವಿವಿಧ ಸರ್ಕಾರಿ ಯೋಜನೆಗಳಾದ ಕನಿಷ್ಠ ಬೆಂಬಲ ಬೆಲೆ ನಿಗದಿ, ಸಬ್ಸಿಡಿ ಪಾವತಿ, ಬೆಳೆ ಪ್ರದೇಶದ ಅಂದಾಜು, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆಗಾಗಿ ಬಳಸಲಾಗುತ್ತದೆ".

ಈ ಹಿನ್ನೆಲೆಯಲ್ಲಿ ಈ ಬೆಳೆ ಸಮೀಕ್ಷೆಯ ಅನುಷ್ಠಾನವನ್ನು ಕೈಗೊಳ್ಳುವಂತೆ ನಿರ್ದೇಶಿಸಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಬೆಳೆ ಸಮೀಕ್ಷೆಯನ್ನು ಅದೇ ಗ್ರಾಮದಲ್ಲಿ ವಾಸಿಸುವ ಯುವ ಖಾಸಗಿ ನಿವಾಸಿಗಳು (Private Resident) ಪ್ರತಿ ಸರ್ವೆ ನಂಬರಿಗೆ ಭೇಟಿ ನೀಡಿ ಬೆಳೆದ ಪ್ರತಿಯೊಂದು ಬೆಳೆ ವಿವರನ್ನು ಮೊಬೈಲ್ಆಪ್‌ನಲ್ಲಿ ದಾಖಲಿಸಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ಜಮೀನಿನ ಮಾಲೀಕರಾದ ರೈತರಿಗೆ ತಿಳಿಸಲಾಗುತ್ತದೆ ಮತ್ತು ರೈತರು ಹಾಜರಿದ್ದು ಸರ್ವೆ ನಂಬರ್ ಗುರುತಿಸಿ ಬೆಳೆ ವಿವರ ದಾಖಲಿಸುವಲ್ಲಿ ಸಹಕರಿಸುವಂತೆ ಹೆಚ್ಚು ಪರಿಣಾಮಕಾರಿಯಾಗಿ ಬೆಳೆ ಸಮೀಕ್ಷೆ ಕೈಗೊಳ್ಳಲು ಅನುಕೂಲವಾಗಲು ಗ್ರಾಮ ಪಂಚಾಯತಿಗಳಲ್ಲಿ ಪ್ರಚಾರ ಕೈಗೊಳ್ಳುವಂತೆ ಕೋರಿರುತ್ತಾರೆ.

ಆದುದರಿಂದ ಗ್ರಾಮ ಪಂಚಾಯತಿಗಳಲ್ಲಿ ಬೆಳೆ ಸಮೀಕ್ಷೆ ಪರಿಣಾಮಕಾರಿಯಾಗಲು ಈ ಕೆಳಗಿನಂತೆ ಮೂರು ವಿಧದಲ್ಲಿ ಪ್ರಚಾರ ಕೈಗೊಳ್ಳಲು ಕ್ರಮ ವಹಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

1. ಪ್ರಚಾರ ಫಲಕ : ಗ್ರಾಮ ಪಂಚಾಯತಿಯಲ್ಲಿ, ಬಸ್ ನಿಲ್ದಾಣಗಳಲ್ಲಿ ಹಾಗೂ ಸಂತೆ ನಡೆಯುವ ಸ್ಥಳಗಳಲ್ಲಿ ಹೀಗೆ ಪ್ರಮುಖ ಸ್ಥಳಗಳಲ್ಲಿ ಫಲಕ ಹಾಕುವುದು.
2. ಕರ ಪತ್ರಗಳು : ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ರೈತರಿಗೆ ಕರಪತ್ರಗಳನ್ನು ವಿತರಿಸುವುದು.
3. ಟಾಂಟಾಂ : ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಹಳ್ಳಿಗಳ ಗ್ರಾಮ ಠಾಣಗಳಲ್ಲಿ, ಸಂತೆಗಳಲ್ಲಿ 3–4 ದಿನಕ್ಕೊಮ್ಮೆ ಟಾಂಟಾಂ ಮೂಲಕ ತಿಳಿಸುವುದು.

ಈ ಸಂಬಂಧ ಪ್ರಚಾರಕ್ಕಾಗಿ ಉಪಯೋಗಿಸಬಹುದಾದ ಫಲಕ ಮತ್ತು ಕರಪತ್ರದ ಕರಡನ್ನೂ ಈ ಪತ್ರದೊಡನೆ ಲಗತ್ತಿಸಲಾಗಿದೆ.

ತಮ್ಮ ನಂಬುಗೆಯ,

23/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.